# ಆಧುನಿಕ ಸಮಾಜದ ನಿರ್ಮಾಣದಲ್ಲಿ ಶಾಹು ಮಹಾರಾಜರ ಕೊಡುಗೆಗಳು

**ಮಲ್ಲಿಕಾರ್ಜುನ ರಾ. ಜರಕುಂಟಿ**

ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಶ್ರೀ ಎಸ್. ಆರ್. ಕಂಠಿ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ, ಮುಧೋಳ.

DOI: https://doi.org/10.5281/zenodo.17296134

## ABSTRACT:

ಆಧುನಿಕ ಭಾರತದ ಸಾಮಾಜಿಕ ಪುನರ್‌ನಿರ್ಮಾಣದಲ್ಲಿ ಶಾಹು ಮಹಾರಾಜರ ಕೊಡುಗೆಗಳು ಅಪ್ರತಿಮವಾಗಿವೆ. ಜಾತಿ–ಆಧಾರಿತ ಅಸಮಾನತೆ, ಅಸ್ಪೃಶ್ಯತೆ ಮತ್ತು ಶೋಷಣೆಯ ವಿರುದ್ಧ ಅವರು ಶಕ್ತಿಯುತ ಹೋರಾಟ ನಡೆಸಿ ಸಮಾಜದಲ್ಲಿ ಸಮಾನತೆ ಮತ್ತು ನ್ಯಾಯದ ಬುನಾದಿ ಹಾಕಿದರು. ಶಿಕ್ಷಣದ ಹಕ್ಕನ್ನು ಎಲ್ಲ ವರ್ಗಗಳಿಗೂ ಮುಕ್ತಗೊಳಿಸಿ, ವಿಶೇಷವಾಗಿ ದಲಿತರು, ಬಡವರು ಹಾಗೂ ಮಹಿಳೆಯರಿಗೆ ಉಚಿತ ಶಿಕ್ಷಣವನ್ನು ಕಲ್ಪಿಸಿದರು. ಸಮಾಜದಲ್ಲಿ ಹಿಂದುಳಿದ ವರ್ಗಗಳಿಗೆ ಉದ್ಯೋಗಾವಕಾಶ ಹಾಗೂ ರಾಜಕೀಯ ಪ್ರತಿನಿಧಿತ್ವ ನೀಡುವಲ್ಲಿ ಶಾಹು ಮಹಾರಾಜರು ಅಗ್ರಗಣ್ಯರಾಗಿದ್ದರು. ಅವರ ದೃಷ್ಟಿಕೋನದಲ್ಲಿ "ಸಮಾನತೆ, ಸ್ವಾತಂತ್ರ್ಯ ಮತ್ತು ಬಾಂಧವ್ಯ" ಎಂಬ ತತ್ವಗಳು ಪ್ರತಿಫಲಿಸಿದವು. ಶಾಹು ಮಹಾರಾಜರ ನೂತನ ನೀತಿಗಳು ಸಾಮಾಜಿಕ ನ್ಯಾಯದ ಬಾಗಿಲು ತೆರೆಯುವಂತೆ ಮಾಡಿದ್ದು, ಭಾರತದಲ್ಲಿ ಪ್ರಜಾಪ್ರಭುತ್ವದ ನೆಲೆಬೀಳುವಿಕೆಗೆ ಬಲವಾದ ನೆಲೆ ಒದಗಿಸಿತು. ಹೀಗಾಗಿ ಅವರು ಆಧುನಿಕ ಸಮಾಜದ ಶಿಲ್ಪಿಗಳಾಗಿ ಇತಿಹಾಸದಲ್ಲಿ ಸದಾ ಸ್ಮರಣೀಯರಾಗಿದ್ದಾರೆ.

## KEYWORDS:

ಸಮಾನತೆ, ಶೋಷಿತ, ಅಸ್ಪೃಶ್ಯ, ಶೈಕ್ಷಣಿಕ, ಸಬಲೀಕರಣ.

**ಪೀಠಿಕೆ:**

ಭಾರತದಲ್ಲಿ ಕೆಲವು ಸಮಾಜ ಸುಧಾರಕರು ಸಾಮಾಜಿಕ ಅಭಿವೃದ್ಧಿಯಲ್ಲಿ ಅಮೂಲ್ಯವಾದ ಮತ್ತು ಪ್ರಭಾವಶಾಲಿಯಾದ ಕೊಡುಗೆಯನ್ನು ನೀಡಿದ್ದಾರೆ. ಅವರು ಸಮಾಜದಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರಲು ಹಗಲಿರುಳು ಶ್ರಮಿಸಿದ್ದಾರೆ. ಅಂಥವರಲ್ಲಿ ಅತ್ಯಂತ ಪ್ರಸಿದ್ಧ ಮತ್ತು ಗೌರವಾನ್ವಿತ ವ್ಯಕ್ತಿತ್ವವನ್ನು ಹೊಂದಿದ ಶಾಹು ಮಹಾರಾಜರು. ಇವರು ಸಹಾನುಭೂತಿಯ ಸ್ವಭಾವ, ರಚನಾತ್ಮಕ ಮನಸ್ಸು ಮತ್ತು ಆಧುನಿಕ ಚಿಂತನೆಗಳನ್ನು ಹೊಂದಿದ್ದ ರಾಜರಾಗಿದ್ದರು. ಇವರು ಉತ್ತಮವಾದ ಶಿಕ್ಷಣವನ್ನು ಪಡೆದಿದ್ದರಿಂದ ಉತ್ತಮ ಸಮಾಜದ ನಿರ್ಮಾಣದಲ್ಲಿ ಅದರ ಮಹತ್ವ ಮತ್ತು ಅಗತ್ಯತೆಯನ್ನು ಅರಿತುಕೊಂಡವರಾಗಿದ್ದರು. ಅವರ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಅವರ ಚಿಂತನಾ ಪ್ರಕ್ರಿಯೆ, ಸಿದ್ಧಾಂತ ಮತ್ತು ವಿವಿಧ ವಿಷಯಗಳ ಬಗ್ಗೆ ಅವರ ಅಭಿಪ್ರಾಯಗಳು ಆಧುನಿಕಪ್ರಾಯವಾಗಿದ್ದವು. ಆದ್ದರಿಂದ ಅವರು ಸಮಾಜ ಸುಧಾರಣಾ ಚಳುವಳಿ ಮತ್ತು ಮಹಿಳಾ ಸಬಲೀಕರಣ ಚಳುವಳಿಗಳನ್ನು ಆರಂಭಿಸಿದರು. ಈ ಚಳುವಳಿಗಳಿಂದಾಗಿ ಶೋಷಣೆಗೊಳಗಾದ ದುರ್ಬಲವರ್ಗಗಳು ಸಮಾನತೆಯ ಸಮಾಜಕ್ಕೆ ಮಾರಕವಾದ ಕೆಲವು ಸಾಮಾಜಿಕ ಸಂಪ್ರದಾಯಗಳನ್ನು ವಿರೋಧಿಸಿದರು. ಹೀಗೆ ಶೋಷಿತರಲ್ಲಿ ಸಮಾನತೆಯ ಬದುಕನ್ನು ಕಟ್ಟಿಕೊಳ್ಳುವ ಮನೋಭಾವನೆಯನ್ನು ಹುಟ್ಟುಹಾಕುವಲ್ಲಿ ಶಾಹು ಮಹಾರಾಜರು ಪ್ರಮುಖ ಪಾತ್ರ ವಹಿಸಿದರು. ಆಧುನಿಕ ಸಮಾಜದ ನಿರ್ಮಾಣಕ್ಕೆ ಇವರು ನೀಡಿದ ಕೊಡುಗೆಗಳು ಅಪಾರ; ಅವುಗಳನ್ನು ಪ್ರಸ್ತುತ ಲೇಖನದ ಮೂಲಕ ವ್ಯಕ್ತಪಡಿಸುವ ಪ್ರಾಮಾಣಿಕ

ಪ್ರಯತ್ನವನ್ನು ಮಾಡಲಾಗಿದೆ.

ಭಾರತದ ಸಾಮಾಜಿಕ ಸುಧಾರಕರಲ್ಲಿ ಪ್ರಮುಖರಾದ ಶಾಹು ಅವರು ಜೈಸಿಂಗರಾವ್ ಅಪ್ಪಾಸಾಹೇಬ್ ಘಾಟ್ಗೆ ಮತ್ತು ರಾಧಾಬಾಯಿಯವರ ಉದರದಲ್ಲಿ ಜೂನ್ 26, 1874ರಂದು ಜನಿಸಿದರು. ಇವರು ಕೊಲ್ಹಾಪುರ ಜಿಲ್ಲೆಯ ಕಾಗಲ್ ಜಹಗೀರನಲ್ಲಿರುವ ಮರಾಠಾ ವಂಶದಿಂದ ಬಂದವರಾಗಿದ್ದು, ಇವರ ಮೂಲ ಹೆಸರು ಯಶ್ವಂತರಾವ್ ಎಂಬುದಾಗಿತ್ತು. 1884ರಲ್ಲಿ ಇವರನ್ನು ಕೊಲ್ಹಾಪುರದ ರಾಣಿ ಆನಂದಿಬಾಯಿಯವರು ದತ್ತು ಪಡೆದುಕೊಂಡು ಇವರಿಗೆ 'ಶಾಹು' ಎಂದು ಮರುನಾಮಕರಣ ಮಾಡಿದರು. ಶಾಹುರವರು ಏಪ್ರಿಲ್ 02, 1894ರಂದು ರಾಜರಾಗುವ ಮೂಲಕ ಶಾಹು ಮಹಾರಾಜ್ ಎಂದು ಕರೆಸಿಕೊಂಡರು. ಇವರ ಪತ್ನಿ ಲಕ್ಷ್ಮೀಬಾಯಿಯು ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳಿಗೆ ಜನ್ಮ ನೀಡಿದರು. ತದನಂತರ ಸಮಾಜ ಸುಧಾರಕರಾಗಿ ಆಧುನಿಕ ಸಮಾಜವನ್ನು ನಿರ್ಮಿಸಲು ತಮ್ಮ ಬದುಕನ್ನೇ ಮೀಸಲಿರಿಸಿದ ಮಹಾನ್ ಚೇತನರಾಗಿ ಜೀವನವನ್ನು ಸವೆಸಿದರು. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಇಂತಹ ಬಹುಮುಖ ಪ್ರತಿಭೆಯ ವ್ಯಕ್ತಿತ್ವದ ಅನಾವರಣವನ್ನು ಆಧುನಿಕ ಸಮಾಜದ ನಿರ್ಮಾಣಕ್ಕೆ ನೀಡಿರುವ ಅವರ ಪ್ರಮುಖ ಕೊಡುಗೆಗಳಲ್ಲಿ ಕಾಣಬಹುದಾಗಿದೆ; ಅವು ಇಂತಿವೆ.

**ಶೈಕ್ಷಣಿಕ ಕೊಡುಗೆಗಳು**

ಶಾಹು ಮಹಾರಾಜರು ಅವತ್ತಿನ ಕಾಲದ ಸಮಾಜದ ಸುಧಾರಣೆಗೆ ಶಿಕ್ಷಣವನ್ನೇ ಬಹುದೊಡ್ಡ ಅಸ್ತ್ರವನ್ನಾಗಿ ಬಳಸಿಕೊಂಡರು. ಶಿಕ್ಷಣವು ಸಮಾಜವನ್ನು ಬದಲಿಸಬಲ್ಲದು ಎಂಬ ಮಾತಿನಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿದ್ದರು. ಹೀಗಾಗಿ ಶಾಹು ಮಹಾರಾಜರು ಶೈಕ್ಷಣಿಕ ಕ್ಷೇತ್ರಕ್ಕೆ ಹೆಚ್ಚಿನ ಕೊಡುಗೆಗಳನ್ನು ನೀಡಿದರು. ಅಸ್ಪೃಶ್ಯರಿಗಾಗಿ ಅನೇಕ ವಸತಿ ಸಹಿತ ಶಾಲೆಗಳನ್ನು ತೆರೆದರು. ಇವು ಅಸ್ಪೃಶ್ಯರ ಅಭಿವೃದ್ಧಿಗೆ ದಾರಿ ಮಾಡಿಕೊಟ್ಟವು. ತಮ್ಮ ಪ್ರಾಂತ್ಯದಲ್ಲಿ ಶಿಕ್ಷಣದ ಮೂಲಕ ಹಿಂದುಳಿದ ಸಮುದಾಯಗಳನ್ನು ಉನ್ನತೀಕರಣಗೊಳಿಸಲು ಕೊಲ್ಹಾಪುರದಲ್ಲಿ ಅಸ್ಪೃಶ್ಯರನ್ನೊಳಗೊಂಡಂತೆ ಸಮಾಜದಲ್ಲಿ ಹಿಂದುಳಿದ ವಿವಿಧ ಸಮುದಾಯಗಳ ವಿದ್ಯಾರ್ಥಿಗಳಿಗಾಗಿ ಅನೇಕ ವಸತಿ ನಿಲಯಗಳನ್ನು ಸ್ಥಾಪಿಸಿದರು. ಈ ಕಾರ್ಯಸಾಧನೆಗಾಗಿ ಶಾಹು ಮಹಾರಾಜರು 'ಶಿಕ್ಷಣ ಪ್ರಸರಣ ಮಂಡಳಿ' (ವಿದ್ಯಾ ಪ್ರಸಾರ ಮಂಡಲ) ಎಂಬ ಸಂಸ್ಥೆಯನ್ನು ಹುಟ್ಟು ಹಾಕಿದರು. ಈ ಸಂಸ್ಥೆ ಅಧೀನದಲ್ಲಿ ಮುಖ್ಯವಾಹಿನಿಯ ಜನರ ಮಕ್ಕಳಿಗೆ ಸಮಾನವಾಗಿ ಅಸ್ಪೃಶ್ಯರ ಮಕ್ಕಳಿಗೆ ಶೈಕ್ಷಣಿಕ ಸ್ಥಾನಮಾನವನ್ನು ನೀಡಿದರು. ಶಾಹು ಮಹಾರಾಜರ ಪಟ್ಟಾಭಿಷೇಕದ ಸಂದರ್ಭದಲ್ಲಿ ಅವರ ಪ್ರಾಂತ್ಯದಲ್ಲಿ ಅಸ್ಪೃಶ್ಯರಿಗಾಗಿ ಕೇವಲ ಐದು ಶಾಲೆಗಳಿದ್ದವು. ಕೆಲವೇ ವರ್ಷಗಳಲ್ಲಿ ಅವುಗಳ ಸಂಖ್ಯೆ 27ಕ್ಕೇರಿತು. ಅಲ್ಲದೆ ಅಸ್ಪೃಶ್ಯರಲ್ಲಿ ಶಿಕ್ಷಣವನ್ನು ಹರಡಿಸಲು ಮತ್ತು ಉತ್ತೇಜಿಸಲು ಹೊಸ ಶಿಕ್ಷಕರನ್ನು ನೇಮಿಸಿದರು. ಇದು ಶಾಹು ಮಹಾರಾಜರು ಅಸ್ಪೃಶ್ಯರ ಶಿಕ್ಷಣಕ್ಕಾಗಿ ನೀಡಿದ ಮಹತ್ತರ ಕೊಡುಗೆಯಾಗಿದೆ.

ಅಸ್ಪೃಶ್ಯರ ಉನ್ನತಿಗಾಗಿ ಮೀಸಲಾಗಿರುವ ಸಂಸ್ಥೆಗಳಿಗೆ ಉದಾರವಾಗಿ ದೇಣಿಗೆ ನೀಡಿದರು. 1920ರಲ್ಲಿ ನಾಗ್ಪುರದಲ್ಲಿ ನಡೆದ ಅಖಿಲ ಭಾರತ ಹಿಂದುಳಿದ ವರ್ಗಗಳ ಸಮ್ಮೇಳನದ ಅಧ್ಯಕ್ಷತೆ ವಹಿಸಿ, ಹಿಂದುಳಿದ ವರ್ಗಗಳ ಉನ್ನತೀಕರಣಕ್ಕಾಗಿ ಅವಶ್ಯವಿರುವ ಯೋಜನೆಗಳನ್ನು ಸಿದ್ಧಪಡಿಸಿದರು. ಚೋಖಮೇಲಾ ಬೋರ್ಡಿಂಗ್‌ಗೆ 5000 ರೂ.ಗಳನ್ನು ಉದಾರವಾಗಿ ದೇಣಿಗೆ ನೀಡಿ ಅಲ್ಲಿನ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದರು. ಶಾಹು

ಮಹಾರಾಜರ ಈ ರೀತಿಯ ಪ್ರಯತ್ನಗಳು ಅವರು ಹೊರಡಿಸಿದ ಆದೇಶಗಳಲ್ಲಿ ಪ್ರತಿಫಲಿಸುತ್ತವೆ. ಇಂತಹ ಆದೇಶಗಳಲ್ಲಿ ನವೆಂಬರ್ 11, 1911ರಂದು ಹೊರಡಿಸಿದ ಆದೇಶ ಅತ್ಯಂತ ಪ್ರಮುಖವಾದದ್ದಾಗಿದೆ. ಈ ಆದೇಶದಲ್ಲಿ ಹೇಳಿರುವಂತೆ ಅವರ ಪ್ರಾಂತ್ಯದಲ್ಲಿ ಅಸ್ಪೃಶ್ಯರಿಗೆ ಎಲ್ಲ ರೀತಿಯ ಶಿಕ್ಷಣವನ್ನು ಉಚಿತವಾಗಿ ನೀಡಲಾಯಿತು. ಅಸ್ಪೃಶ್ಯ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನ್ಯಾಯಾಲಯದಿಂದ ವಿಶೇಷ ವಿದ್ಯಾರ್ಥಿ ವೇತನವನ್ನು ನೀಡಲಾಯಿತು. ಇದರಂತೆ ಏಪ್ರಿಲ್ 07, 1919ರಂದು ಮತ್ತೊಂದು ಆದೇಶವನ್ನು ಹೊರಡಿಸಿದರು. ಈ ಆದೇಶದ ಮೂಲಕ ಅಸ್ಪೃಶ್ಯರಲ್ಲಿ ಶಿಕ್ಷಣವನ್ನು ಉತ್ತೇಜಿಸಲು 2500 ರೂ. ಗಳನ್ನು ನೀಡುವುದರೊಂದಿಗೆ ಅವರಿಗೆ ಪುಸ್ತಕಗಳನ್ನು, ಸ್ಲೇಟ್‌ಗಳನ್ನು ಮತ್ತು ಪೆನ್ಸಿಲ್‌ಗಳನ್ನು ನೀಡಿದರು. ಶಾಹು ಮಹಾರಾಜರ ಮತ್ತೊಂದು ಆದೇಶದಂತೆ ಮುಖ್ಯವಾಹಿನಿಯ ಜನರ ಶಿಕ್ಷಣ ಮತ್ತು ಅಸ್ಪೃಶ್ಯರ ಶಿಕ್ಷಣ ಒಂದೇ ರೀತಿಯಲ್ಲಿರಬೇಕು. ಸರ್ಕಾರಿ ಅನುದಾನಿತ ಶಾಲೆಗಳು ಅಸ್ಪೃಶ್ಯ ವಿದ್ಯಾರ್ಥಿಗಳನ್ನು ಗೌರವದಿಂದ ನಡೆಸಿಕೊಳ್ಳಬೇಕು ಮತ್ತು ಅವರನ್ನು ಶಾಲೆಗಳಿಗೆ ದಾಖಲಿಸಿಕೊಳ್ಳಬೇಕು ಎಂದರು. ಈ ಆದೇಶವನ್ನು ಪ್ರಾಂತ್ಯದ ವಿವಿಧ ಶೈಕ್ಷಣಿಕ ಶಾಖೆಗಳಿಗೆ ತಲುಪಿಸಿದರು.

**ಮಹಿಳಾ ಸಬಲೀಕರಣ**

ಭಾರತದ ಇತಿಹಾಸದಲ್ಲಿ ಪುರುಷ ಮತ್ತು ಮಹಿಳಾ ಪರಂಪರೆಯನ್ನು ತೌಲನಿಕವಾಗಿ ನೋಡಿದರೆ ಸ್ಮೃತಿಗಳ ಕಾಲದಿಂದಲೂ ಮಹಿಳೆಯರ ಸ್ಥಾನಮಾನ ಕುಂಠಿತವಾಗಿಯೇ ಇರುವುದನ್ನು ಕಾಣುತ್ತೇವೆ. ಮೊದಲಿನಿಂದಲೂ ಸಾಮಾಜಿಕ ವ್ಯವಸ್ಥೆಯಲ್ಲಿ ಪುರುಷಪ್ರಧಾನ ವ್ಯವಸ್ಥೆಯೇ ವ್ಯಾಪಕವಾಗಿದ್ದು, ಮಹಿಳೆಯರ ಪಾತ್ರ ಗೌಣವಾಗಿಯೇ ಉಳಿದುಕೊಂಡು ಬಂದಿರುತ್ತದೆ. ಇದೇ ರೀತಿಯಲ್ಲಿ 18 ಮತ್ತು 19ನೇ ಶತಮಾನಗಳಲ್ಲಿ ಮಹಿಳೆಯರು ಸಮಾಜದಲ್ಲಿ ಅನೇಕ ರೀತಿಯ ನಿರ್ಬಂಧಗಳಿಗೊಳಪಟ್ಟು ಬಳಲುವಂತಹ ಪರಿಸ್ಥಿತಿ ಇತ್ತು. ಏಕೆಂದರೆ ಈ ಕಾಲಘಟ್ಟದಲ್ಲಿ ಬಹುತೇಕ ಮಹಿಳೆಯರು ಅಶಿಕ್ಷಿತರಾಗಿದ್ದರಲ್ಲದೆ, ಔಪಚಾರಿಕ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿರಲಿಲ್ಲ. ಅಲ್ಲದೆ ವಿಧವೆಯರ ಸ್ಥಿತಿಯೂ ಕೂಡ ಕೆಟ್ಟದಾಗಿತ್ತು. ಮಹಿಳೆಯರ ಕುರಿತು ಹೆಚ್ಚಿನ ಗೌರವವನ್ನು ಹೊಂದಿದ್ದ ಶಾಹು ಮಹಾರಾಜರು ಈ ರೀತಿಯ ಸಮಾಜದ ಏರಿಳಿತಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಮಹಿಳೆಯರ ಸಬಲೀಕರಣಕ್ಕಾಗಿ ಸಾಕಷ್ಟು ರೀತಿಯಲ್ಲಿ ಪ್ರಯತ್ನಿಸಿದರು. ವಿಧವಾ ಪುನರ್ವಿವಾಹಕ್ಕೆ ತಮ್ಮ ಪ್ರಾಂತ್ಯದಲ್ಲಿ ಅವಕಾಶ ಕಲ್ಪಿಸಿಕೊಟ್ಟರು. ಬುದ್ಧಿವಂತ ಹೆಣ್ಣುಮಕ್ಕಳನ್ನು ಉನ್ನತ ಶಿಕ್ಷಣವರೆಗೂ ಶಿಕ್ಷಣವನ್ನು ಪಡೆಯುವಂತೆ ಪ್ರೇರೇಪಿಸಿದರು. 1910–11ರ ಅವಧಿಯಲ್ಲಿ 15 ವಿದ್ಯಾರ್ಥಿಗಳು ಮತ್ತು 1911–12ರಲ್ಲಿ 10 ವಿದ್ಯಾರ್ಥಿಗಳನ್ನು ಬಾಂಬೆ, ಪುಣೆ, ಮದ್ರಾಸ್ ಮತ್ತು ಇತರ ಸ್ಥಳಗಳಲ್ಲಿ ವೈದ್ಯಕೀಯ ವಿಜ್ಞಾನದಲ್ಲಿ ವೃತ್ತಿಪರ ಶಿಕ್ಷಣಕ್ಕಾಗಿ ಕಳುಹಿಸಿದರು. 1913–14ರ ಅವಧಿಯಲ್ಲಿ 06 ವಿದ್ಯಾರ್ಥಿಗಳನ್ನು ಬಾಂಬೆಯ ಮೆಡಿಕಲ್ ಕಾಲೇಜು, ಪುಣೆಯ ವೈದ್ಯಕೀಯ ಕಾಲೇಜು, ಪುಣಾ ತರಬೇತಿ ಕೇಂದ್ರ ಮತ್ತು ಪುಣೆಯ ಡೆಕ್ಕನ್ ಕಾಲೇಜುಗಳಿಗೆ ಉನ್ನತ ಶಿಕ್ಷಣಕ್ಕಾಗಿ ಕಳುಹಿಸಿದರು. ಹೀಗೆ ಮಹಿಳೆಯರಿಗೆ ಶಿಕ್ಷಣವನ್ನು ಕೊಡಿಸುವ ಮೂಲಕ ಶಾಹು ಮಹಾರಾಜರು ಮಹಿಳಾ ಸಬಲೀಕರಣಕ್ಕೆ ಭದ್ರಬುನಾದಿಯನ್ನು ಹಾಕಿದರು.

**ಸಾಮಾಜಿಕ ಅಸಮಾನತೆಯ ನಿರ್ಮೂಲನೆ**

ಶಾಹು ಮಹಾರಾಜರು ಹಿಂದೂ ಸಮಾಜದಲ್ಲಿನ ಸಾಂಪ್ರದಾಯಿಕ ಜಾತಿ ವ್ಯವಸ್ಥೆಯನ್ನು ವಿರೋಧಿಸುವ ಮೂಲಕ ಸಮಾನತೆಯ ಆಧಾರದ ಮೇಲೆ ಹೊಸ

ಸಮಾಜವನ್ನು ನಿರ್ಮಿಸಲು ನಿರಂತರವಾಗಿ ಶ್ರಮಿಸಿದರು. ಜಾತಿ ನಿರ್ಮೂಲನೆ, ಅಸ್ಪೃಶ್ಯತೆಯ ನಿರ್ಮೂಲನೆ, ಮೇಲ್ವರ್ಗ ಮತ್ತು ಕೆಳವರ್ಗಗಳ ನಡುವಿನ ಕೃತಕ ಗೋಡೆಗಳನ್ನು ನಿರ್ಬಂಧಿಸುವ ಗುರಿಯನ್ನು ಹೊಂದಿದವರಾಗಿದ್ದರು. ಈ ಹಿನ್ನೆಲೆಯಲ್ಲಿ ಶಾಹು ಮಹಾರಾಜರು ತಮ್ಮ ಪ್ರಾಂತ್ಯದಲ್ಲಿ ಅಸ್ಪೃಶ್ಯರನ್ನು ಯಾರೂ ಕೀಳರಿಮೆಯ ಭಾವನೆಯಿಂದ ಕಾಣಬಾರದೆನ್ನುವ ಆದೇಶವನ್ನು ಹೊರಡಿಸಿದರು. ಒಂದು ವೇಳೆ ಇದು ಸಂಭವಿಸಿದಲ್ಲಿ ಗ್ರಾಮದ ಕಾರ್ಮಿಕರು, ಪೋಲೀಸರು ಮತ್ತು ಸ್ಥಳೀಯ ಕಂದಾಯ ಸಿಬ್ಬಂದಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದರು. ಅಲ್ಲದೆ ಅಸ್ಪೃಶ್ಯರಿಗಾಗಿ ಪ್ರಾಂತ್ಯದಲ್ಲಿನ ಸಾರ್ವಜನಿಕ ನಲ್ಲಿಗಳು, ಬಾವಿಗಳು, ಸರೋವರಗಳು, ಹೊಟೇಲ್‌ಗಳು, ಆಸ್ಪತ್ರೆಗಳು, ಶಾಲೆಗಳು ಮತ್ತು ಕಛೇರಿಗಳನ್ನು ತೆರೆಯುವ ಮೂಲಕ ಅವರಿಗೆ ಸಮಾನ ಹಕ್ಕುಗಳನ್ನು ನೀಡಿದರು.

ಶಾಹು ಮಹಾರಾಜರು "ರಾಷ್ಟ್ರದ ನಿಜವಾದ ಸೇವೆಯು ಅಸ್ಪೃಶ್ಯರನ್ನು ಗುಲಾಮರನ್ನಾಗಿ ಮಾಡಿದ ಮುಖ್ಯವಾಹಿನಿಯ ಜನರಿಂದ ನಿರ್ಮಿತವಾದ ಸಂಕೋಲೆಗಳನ್ನು ಮುರಿಯುವಲ್ಲಿದೆ" ಎಂದು ಹೇಳುತ್ತಾ, ಅಸ್ಪೃಶ್ಯರ ಕುರಿತಾಗಿರುವ ತಮಗಿದ್ದ ಕಾಳಜಿಯನ್ನು ವ್ಯಕ್ತಪಡಿಸುತ್ತಾರೆ. ಶಿಕ್ಷಣವನ್ನು ಪಡೆಯುವ ಸ್ಥಳಗಳಲ್ಲಿ ಮೇಲ್ಜಾತಿಯ ಮಕ್ಕಳೊಂದಿಗೆ ಅಸ್ಪೃಶ್ಯ ಮಕ್ಕಳು ಕುಳಿತುಕೊಂಡು ಶಿಕ್ಷಣವನ್ನು ಪಡೆದುಕೊಳ್ಳಬೇಕೆಂದರು. ಇದು ಅಸಮಾನತೆಯನ್ನು ಹೋಗಲಾಡಿಸುವ ಶಾಹು ಮಹಾರಾಜರ ಪ್ರಯತ್ನಗಳಲ್ಲೊಂದಾಗಿತ್ತು. ಅಲ್ಲದೆ ಅಸ್ಪೃಶ್ಯರಿಗೆ ಬ್ರಾಹ್ಮಣರ ಸಮಾನರಂತೆ ದಾರ ಸಂಸ್ಕಾರವನ್ನು ಪಾಲಿಸಲು ಉತ್ತೇಜಿಸಿದರು. ಇದನ್ನು ವಿರೋಧಿಸಿದ ಅಂದಿನ ಬ್ರಾಹ್ಮಣ ಸಮುದಾಯವು ಶಾಹು ಮಹಾರಾಜರನ್ನು ವಿರೋಧಿಸಿ ಬ್ರಿಟಿಷರಿಗೆ ದೂರು ನೀಡುವ ಮೂಲಕ ರಾಜಕೀಯವಾಗಿ ಅವರನ್ನು ನಿಯಂತ್ರಿಸಲು ಪ್ರಯತ್ನಿಸಿದರು. ಈ ಸಂದರ್ಭದಲ್ಲಿ ಶಾಹು ಮಹಾರಾಜರು "ಹಿಂದುಳಿದ ವರ್ಗಗಳಿಗೆ ಸೇವೆ ಸಲ್ಲಿಸುವಾಗ ನನ್ನನ್ನು ಸಿಂಹಾಸನದಿಂದ ಕೆಳಗಿಳಿಸಿದರೂ ನನಗೆ ಚಿಂತೆಯಿಲ್ಲ. ಕಿರುಕುಳಕ್ಕೊಳಗಾದ ಸಮುದಾಯಗಳ ದುಃಖಗಳನ್ನು ನಿರ್ಮೂಲನೆ ಮಾಡಲು ನನ್ನ ಜೀವನದ ಕೊನೆಯ ಉಸಿರಿನವರೆಗೂ ನಾನು ಶಾಶ್ವತವಾಗಿ ಶ್ರಮಿಸುತ್ತೇನೆ" ಎಂದರು. ಹೀಗೆ ಶಾಹು ಮಹಾರಾಜರು ಸಾಮಾಜಿಕ ಅಸಮಾನತೆಯನ್ನು ನಿರ್ಮೂಲನೆ ಮಾಡುವ ಉದ್ದೇಶಕ್ಕಾಗಿ ತಮ್ಮ ಜೀವನದುದ್ದಕ್ಕೂ ಹೋರಾಡಿದರು.

**ಸಾಮಾಜಿಕ ಸುಧಾರಣೆಗಾಗಿ ಮೀಸಲಾತಿ**

18 ಮತ್ತು 19ನೇ ಶತಮಾನಗಳಲ್ಲಿ ಜಾತೀಯತೆಯು ಅಂದಿನ ಸಾಮಾಜಿಕ ರಚನೆಯ ಮೇಲೆ ಗಮನಾರ್ಹವಾದ ಪರಿಣಾಮವನ್ನು ಬೀರಿತ್ತು. ಇದು ಕೆಳಜಾತಿಯ ವ್ಯಕ್ತಿಗಳಿಗೆ ವೃತ್ತಿಪರ ಮತ್ತು ಶೈಕ್ಷಣಿಕ ಅವಕಾಶಗಳನ್ನು ನಿರ್ಬಂಧಿಸಿತು. ಇದರ ಪರಿಣಾಮವಾಗಿ ಕೆಳಜಾತಿಯ ಜನರಲ್ಲಿ ಅಸಾಕ್ಷರತೆ ಮತ್ತು ಬಡತನ ಹೆಚ್ಚಾಗಿತ್ತು. ಹೀಗಾಗಿ ಇವೆಲ್ಲವುಗಳನ್ನು ತಮ್ಮ ತೀಕ್ಷ್ಣ ಮತ್ತು ಸೂಕ್ಷ್ಮ ಆಲೋಚನೆಯ ಮೂಲಕ ಅವುಗಳನ್ನು ಗ್ರಹಿಸಿದ ಶಾಹು ಮಹಾರಾಜರು ಸಮಾಜದ ಎಲ್ಲ ವರ್ಗಗಳಿಗೆ ಸಮಾನವಾದ ಮತ್ತು ಮುಕ್ತವಾದ ಅವಕಾಶಗಳನ್ನು ಕಲ್ಪಿಸಿದರು. ಇದರ ಜೊತೆಗೆ ಆಡಳಿತಾತ್ಮಕ ಹುದ್ದೆಗಳ ಪೈಕಿ ಶೇ. 50ರಷ್ಟು ಸ್ಥಾನಗಳನ್ನು ತಳಸಮುದಾಯದವರಿಗಾಗಿ ಮೀಸಲಿರಿಸಿದರು. ಹೀಗೆ ಅಸ್ಪೃಶ್ಯರಿಗೆ ಮೀಸಲಾತಿಯನ್ನು ಕಲ್ಪಿಸುವುದರೊಂದಿಗೆ ಶೋಷಿತರನ್ನು ಉನ್ನತೀಕರಣಗೊಳಿಸುವ ಕಾರ್ಯವನ್ನು ಛತ್ರಪತಿ ಶಾಹು ಮಹಾರಾಜರು ಮಾಡಿದರು.

**ಕೃಷಿ ಮತ್ತು ತಾಂತ್ರಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು**

ಶಾಹು ಮಹಾರಾಜರು ಕೃಷಿಯ ಬಗ್ಗೆ ಪ್ರಗತಿಪರ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ಹೊಂದಿದ್ದರು. ರಾಜ್ಯದಲ್ಲಿ ಕೃಷಿ ಶಿಕ್ಷಣದ ಮಹತ್ವವನ್ನು ಅರಿತು 1912ರಲ್ಲಿ ಕೊಲ್ಹಾಪುರದಲ್ಲಿ 'ಕಿಂಗ್ ಎಡ್ವರ್ಡ್ ಕೃಷಿ ಸಂಸ್ಥೆ'ಯನ್ನು ಸ್ಥಾಪಿಸಿದರು. ಇದು ಆಧುನಿಕ ಕೃಷಿಯಲ್ಲಿ ಕೃಷಿ ಶಿಕ್ಷಣ ಮತ್ತು ಅದರ ತರಬೇತಿಗಾಗಿ ಸ್ಥಾಪಿಸಿದ ಸಂಸ್ಥೆಯಾಗಿತ್ತು. ಇದಕ್ಕಾಗಿ ಶಾಹು ಮಹಾರಾಜರು 30000 ರೂ.ಗಳನ್ನು ದೇಣಿಗೆ ಸಂಗ್ರಹಿಸಿ, ಅದನ್ನು ರಾಜ್ಯದ ಖಜಾನೆಯಲ್ಲಿ ಶೇ. 06 ರಷ್ಟು ಬಡ್ಡಿ ದರದಲ್ಲಿ ಠೇವಣಿ ಇಟ್ಟರು. ಇದು ವಾರ್ಷಿಕ 2100 ರೂ.ಗಳ ಆದಾಯವನ್ನು ತಂದುಕೊಡುತ್ತಿತ್ತು. ಇದರಲ್ಲಿ ಪ್ರತಿ ವರ್ಷ 1200 ರೂ.ಗಳನ್ನು ಕೃಷಿ ಶಿಕ್ಷಣಕ್ಕೆ ಖರ್ಚು ಮಾಡಿದರು. ಕೃಷಿ ಶಿಕ್ಷಣಕ್ಕೆ ಅವಶ್ಯಕವಾದ ಉತ್ತಮ ಶಿಕ್ಷಕರ ನೇಮಕಾತಿಗಾಗಿ ಈ ಹಣವನ್ನು ಮೀಸಲಿಟ್ಟರು. ಕೃಷಿ ಕಾಯಕವನ್ನು ಮಾಡುವ ಜನರನ್ನು ಉದ್ದೇಶಿಸಿ ಶಾಹು ಮಹಾರಾಜರು "ಇತ್ತೀಚಿನ ದಿನಗಳಲ್ಲಿ ಕೃಷಿ ಕ್ರಮಬದ್ಧವಾಗುತ್ತಿದೆ; ಹೀಗಾಗಿ ಕೃಷಿಯಲ್ಲಿ ಯಶಸ್ಸನ್ನು ಪಡೆಯಲು ನಾವು ಆ ವಿಷಯದ ಕುರಿತಾಗಿರುವ ಪುಸ್ತಕಗಳನ್ನು ಓದಬೇಕು" ಎಂದು ಕರೆಕೊಟ್ಟರು. ಇದು ಮಹಾರಾಜರಿಗೆ ಕೃಷಿ ಕ್ಷೇತ್ರದ ಮೇಲಿರುವ ಆಸಕ್ತಿಯನ್ನು ತೋರಿಸುತ್ತದೆ.

ಕೃಷಿ ಕ್ಷೇತ್ರದಲ್ಲಿ ಶಾಹು ಮಹಾರಾಜರು ಹಲವಾರು ನವೀನ ಕೃಷಿ ಪದ್ಧತಿಗಳನ್ನು ಪರಿಚಯಿಸುವ ಪ್ರಯತ್ನವನ್ನು ಮಾಡಿದರು. ವಿಶೇಷವಾಗಿ ದಕ್ಷಿಣ ಮಹಾರಾಷ್ಟ್ರದಲ್ಲಿ ಚಹಾ ಮತ್ತು ಕಾಫಿ ಕೃಷಿಯನ್ನು ಪರಿಚಯಿಸಿದರು. 1908ರಲ್ಲಿ ಮಹಾರಾಜರು 'ಭಾಗೀರಥಿ ನದಿಗೆ ಆಣೆಕಟ್ಟ'ನ್ನು ನಿರ್ಮಿಸಿದರು. ಇದಕ್ಕೆ ಮಹಾರಾಣಿ 'ಲಕ್ಷ್ಮೀಬಾಯಿ ಸರೋವರ' ಎಂದು ಹೆಸರಿಟ್ಟರು. ಇದು ನೀರಿನ ಸಂರಕ್ಷಣೆಗೆ ಮತ್ತು ಕೃಷಿ ಸಮುದಾಯಕ್ಕೆ ಅಗತ್ಯವಾದ ನೀರಿನ ಸಂಪನ್ಮೂಲಗಳನ್ನು ಒದಗಿಸಿತು. ಶಾಹು ಮಹಾರಾಜರ ಇಂತಹ ಕೃಷಿ ಪರವಾದ ಚಿಂತನೆಗಳು ಇತರರಿಗೂ ಕೂಡ ಮಾರ್ಗಗಳಾಗಿ ನಿಂತಿವೆ.

ಒಟ್ಟಾರೆಯಾಗಿ 18 ಮತ್ತು 19ನೇ ಶತಮಾನಗಳಲ್ಲಿದ್ದ ಸಾಮಾಜಿಕ ಪಿಡುಗುಗಳಾದ ಜಾತೀಯತೆ, ಅಸಮಾನತೆ, ಲಿಂಗ ತಾರತಮ್ಯ, ಅಸ್ಪೃಶ್ಯತೆಗಳ ವಿರುದ್ಧ ಬ್ರಾಹ್ಮಣೇತರರಿಗೆ ಶಿಕ್ಷಣವನ್ನು ಕೊಡಿಸುವ ಮೂಲಕ ಅಸಮಾನತೆಯನ್ನು ಹೋಗಲಾಡಿಸಿ ಸಮಸಮಾಜದ ನಿರ್ಮಾಣಕ್ಕಾಗಿ ಶಾಹು ಮಹಾರಾಜರು ತಮ್ಮ ಬದುಕಿನುದ್ದಕ್ಕೂ ಶ್ರಮಿಸಿದರು. ಭಾರತದ ಸಂವಿಧಾನದ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಉನ್ನತ ಶಿಕ್ಷಣಕ್ಕೂ ಸಹ ಶಾಹು ಮಹಾರಾಜರು ಸಹಾಯವನ್ನು ಮಾಡಿದರು. ಹೀಗಾಗಿ ದಲಿತರ ಶಿಕ್ಷಣಕ್ಕಾಗಿ, ಅಸ್ಪೃಶ್ಯರ ಉದ್ಧಾರಕ್ಕಾಗಿ, ಸಮಾನತೆಯ ಸಾಧನೆಗಾಗಿ ಮತ್ತು ಬ್ರಾಹ್ಮಣೇತರರ ಉನ್ನತೀಕರಣಕ್ಕಾಗಿ ಜೀವನವನ್ನೇ ಒಂದು ಹೋರಾಟವನ್ನಾಗಿಸಿಕೊಂಡವರಲ್ಲಿ ಶಾಹು ಮಹಾರಾಜರು ಪ್ರಮುಖರಾಗಿದ್ದಾರೆ. ಆಧುನಿಕ ಸಮಾಜವನ್ನು ನಿರ್ಮಿಸುವಲ್ಲಿ ಶಿಕ್ಷಣ, ಸಮಾನತೆ ಮತ್ತು ಮಹಿಳಾ ಸಬಲೀಕರಣದಂತಹ ಅಸ್ತ್ರಗಳು ಅತ್ಯಂತ ಪ್ರಮುಖವಾದವುಗಳೆಂದು ಜಗತ್ತಿಗೆ ತೋರಿಸಿಕೊಡುವಲ್ಲಿ ಯಶಸ್ವಿಯಾದ ರಾಜರಾದರು. ಹೀಗಾಗಿ ಇವರನ್ನು 'ಅಸ್ಪೃಶ್ಯರ ಆಶಾಕಿರಣ', 'ಸಮಾನತೆಯ ಹರಿಕಾರ', 'ಆಧುನಿಕ ಸಮಾಜದ ನಿರ್ಮಾಪಕ' ಮತ್ತು 'ಸಮಸಮಾಜದ ಸ್ಥಾಪಕ'ರೆಂದು ಕರೆಯಲಾಗುತ್ತದೆ.

## ಪರಾಮರ್ಶನ ಗ್ರಂಥಗಳು:


1. ಹಿಂದೂರಾವ್ ಸಾಳುಂಕೆ, (1989), ಛತ್ರಪತಿ ಶಾಹು ಸ್ಮೃತಿದರ್ಶನ, ಮಹಾರಾಷ್ಟ್ರ ಗ್ರಂಥಭಂಡಾರ, ಕೊಲ್ಹಾಪುರ.
2. ಖೈರ್ಮೋಡೆ ಸಿ.ಬಿ., (2003), ಡಾ. ಬಿ. ಆರ್. ಅಂಬೇಡ್ಕರ್, ಸಂಪುಟ–1, ಸುಗವಾ ಪ್ರಕಾಶನ, ಪುಣೆ.
3. Dhananjaya Keer, (1976), Shahu Chhatrapati: A Royal Revolutionary, Popular Prakashan, Mumbai.
4. Upadhyay H.C., (1997), Status of Women in India, Anmol Publications, New Delhi.
5. Y.D. Phadke, (1986), Shahu Chhatrapati ani Lokamanya Tilak, Shrividya Prakashan, Pune.
6. Dhananjaya Keer, (2001), Rajashri Shahu Chhatrapati: Ek Samaj Krantikarak Raja, Popular Prakashan, Mumbai.
7. Dr. Vimalkirti, (2008), Chhatrapati Shahuji: Sachitra Jeevani, Samyak Publication, New Delhi.
8. Khanna I.M., (2014), Indian Social Justice: A Case for Review, Partridge publishing India.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.